MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 18-3-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಇಂಡೋನೇಶಿಯಾ ಪಾಮೆಣ್ಣೆ ರಫ್ತು 20 ಶೇಕಡಾ

ಇಂಡೋನೇಶಿಯಾ ಪಾಮೆಣ್ಣೆ ರಫ್ತು ಮಾಡುವ 20 ಶೇಕಡಾ ದೇಶೀ ಮಾರುಕಟ್ಟೆಯಲ್ಲಿ ಮಾರಾಟ ಮಾಡಬೇಕಾದ ಶರ್ತವನ್ನು ಹಿಂತೆಗೆದು ಅದರ ಬದಲಾಗಿ ರಫ್ತು ಮಾಡುವ ಕಚ್ಚಾ ಪಾಮೆಣ್ಣೆ ಮೇಲೆ ಲೆವಿ ವಿಧಿಸಿ, ದೇಶದೊಳಗೆ (ಇಂಡೋನೇಶಿಯಾದಲ್ಲಿ) ಖಾದ್ಯತೈಲ ಸಬ್ಸಿಡಿ ನೀಡಲಾಗುವುದೆಂದು ಅಲ್ಲಿನ ಸಚಿವರು ಹೇಳಿದ್ದಾರೆನ್ನಲಾಗಿದೆ.

## ಈ ವರ್ಷ ಭಾರತದಿಂದ ಸಕ್ಕರೆ ರಫ್ತು ಎರಡುವರೆ ಪಟ್ಟು ಅಧಿಕ

2021 ಅಕ್ಟೋಬರ್ ನಿಂದ 2022 ಫೆಬ್ರವರಿ ಅಂತ್ಯದ ತನಕ ಭಾರತದಿಂದ ಸಕ್ಕರೆ ರಫ್ತು ಎರಡುವರೆ ಪಟ್ಟು ಅಧಿಕಗೊಂಡು 47 ಲಕ್ಷ ಟನ್ ಗಳಾಗಿವೆಯೆಂದು ISMA ಹೇಳಿದೆ. ವರ್ಷದ ಹಿಂದೆ 17.75 ಲಕ್ಷ ಟನ್ ಸಕ್ಕರೆ ರಫ್ತಾಗಿತ್ತು. ಸಕ್ಕರೆ ಉತ್ಪಾದನೆ ಅಕ್ಟೋಬರ್ 2021 ಹಾಗೂ ಮಾರ್ಚ 15, 2022 ತನಕ 283.26 ಲಕ್ಷ ಟನ್ ಗಳಾಗಿವೆಯೆಂದು ಹಾಗೂ ಹಿಂದಿನ ವರ್ಷ ಮಾರ್ಚ 2021 ರ ತನಕದ ಉತ್ಪಾದನೆ 259.37 ಲಕ್ಷ ಟನ್ ಗಳಾಗಿದ್ದು ಈ ವರ್ಷದ ಉತ್ಪಾದನೆ 9 ಶೇಕಡಾ ಹೆಚ್ಚಳವಾಗಿದೆಯೆಂದು ISMA ಪ್ರಕಟಣೆ ತಿಳಿಸಿದೆ.